INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -4, July-August, 2023,
PageNo,29-35
Peer -Reviewed, Refereed Journal

# ಹಲ್ಲರೆ ಗ್ರಾಮದ ಧಾರ್ಮಿಕ ಆಚರಣೆಗಳು– ಒಂದು ಸಾಂಸ್ಕೃತಿಕ ಅವಲೋಕನ

*ರಂಗನಾಥ ಕೆ.[1]
**ಪ್ರೊ.ಗುರುಸಿದ್ದಯ್ಯ. ಸಿ.[2]

ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು, ಆಚರಣೆಯಿಲ್ಲದೆ ಯಾವ ದೈವದ ಅಸ್ಥಿತ್ವವೂ ಇಲ್ಲಿ ಸಾಧ್ಯವಿಲ್ಲ. ಜನಪದ ಧರ್ಮ ಒಂದು ಬಗೆಯಲ್ಲಿ ಆಚರಣೆಯ ಧರ್ಮವಾಗಿದೆ. ಆ ಆಚರಣೆ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ವ್ಯಕ್ತಿಯಿಂದಲೇ ಆಗಬೇಕಾದುದು. ದೇವತೆಗೂ ಸಮಾಜಕ್ಕೂ ಇರುವ ಸಂಬಂಧ ಅಭಿವ್ಯಕ್ತಗೊಳ್ಳುವ ಕ್ರಮದ ವಿವರಗಳೇ ಆಚರಣೆಗಳು. ಸಂಪ್ರದಾಯ ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ ಎನ್ನಲಾಗಿದೆ. ನಂಬಿಕೆ ಆಚರಣೆಯ ಬೆನ್ನೆಲುಬು, ನಂಬಿಕೆಯ ಸಿದ್ಧಾಂತ ಆಚರಣೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ. ಆಚರಣೆ ಹುಟ್ಟುವ ಮುನ್ನ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತವೆ. ಪುರಾಣ ಕತೆ ಮರೆತು ಹೋದ ಸಂದರ್ಭದಲ್ಲೂ ಯಾವುದೇ ಆತಂಕವಿಲ್ಲದೆ ಆಚರಣೆ ಮುಂದುವರಿಯುತ್ತಾ ಹೋಗುವುದನ್ನು ಕಾಣಬಹುದು.

ಆಚರಣೆಗಳು ವಿಶೇಷ ಸಂದರ್ಭದಲ್ಲಿ ಆಚರಿಸಲ್ಪಟ್ಟಾಗ ಹಬ್ಬಗಳೆನಿಸಿಕೊಳ್ಳುತ್ತವೆ. ಈ ಹಬ್ಬಗಳಿಗೆ ವ್ಯಾಪಾರ ವಾಣಿಜ್ಯದ ಸ್ಪರ್ಶವಾದಾಗ ಅದಕ್ಕೆ ಜಾತ್ರೆಯ ಸ್ವರೂಪ ಬರುತ್ತದೆ, ಜಾತ್ರೆಗಳು ಪ್ರಾರಂಭದಲ್ಲಿ ಪ್ರಸಿದ್ಧ ತೀರ್ಥ ಕ್ಷೇತ್ರಗಳಲ್ಲಿ ನಡೆಯುತ್ತಿದ್ದು ನಂತರ ಸ್ಥಳೀಯವಾದವೆಂಬ ಅಭಿಪ್ರಾಯವಿದೆ. ಪಾಪ ಪರಿಹಾರಕ್ಕಾಗಿ ದೇಶದ ಮೂಲೆ ಮೂಲೆಗಳಿಂದ ಜನ ಅಥವಾ ಕ್ಷೇತ್ರದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆಯುತ್ತಿದ್ದರು ಅನಂತರ ಕೆಲವು ಹಳ್ಳಿಗಳಲ್ಲಿ ನಿಯತ ಅಥವಾ ಅನಿಯತ ಕಾಲಗಳಲ್ಲಿ ಅದ್ದೂರಿಯಿಂದ ಜರುಗುತ್ತಿದ್ದ ದೊಡ್ಡ ಹಬ್ಬಗಳಲ್ಲಿ ನೆಂಟರಿಷ್ಟರ ಜೊತೆಗೆ ಶ್ರದ್ಧಾವಂತ ಭಕ್ತರೂ ಬರಲಾರಂಭಿಸಿದರು. ದೇವರು ಪ್ರಭಾವಶಾಲಿ ಆದರಂತೂ ಜನರ ಗದ್ದಲವೂ ಅಧಿಕವಾಗುತ್ತಿತ್ತು ಒಂದು ದಿನದ ಹಬ್ಬ ಮೂರು ಅಥವಾ ಹೆಚ್ಚು ದಿನಗಳಲ್ಲಿ ಹಬ್ಬುತ್ತಾ ಕುಣಿತ, ಮೆರೆತಗಳು ಕೂಡಿಕೊಂಡು ಮದ್ದು ಪಟಾಕಿಗಳ ವೈಭವ

1. ಸಂಶೋಧಕರು, ದಕ್ಷಿಣ ಭಾರತೀಯ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು.
2. ಪ್ರಾಧ್ಯಾಪಕರು,ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ ಮೈಸೂರು.

ಆಕರ್ಷಕವಾಗಿ ಅಂಗಡಿ ಮುಂಗಟ್ಟುಗಳಲ್ಲಿ ಜಮಾಯಿಸಿ ಜನಮರುಳಾಗಿ ಪರುಷೆ ಸೇರಿದಾಗ ಅದು ಜಾತ್ರೆಯೆಂಬ ನಾಮಕರಣಕ್ಕೆ ಯೋಗ್ಯವಾಯಿತು, ಕೊನೆಗೆ ರೈತರ ಜೀವನಾಡಿಯಂತಿರುವ ದನಗಳ ನೆರೆವಿಯೂ ಸಂಘಟನೆಗೊಂಡಾಗ ಆ ಪದದ ಅರ್ಥ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕಾಲ ಕ್ರಮೇಣ ಸಾಂಸ್ಕೃತಿಕ ಮಹತ್ವವನ್ನು ಪಡೆದು ಕೊನೆಗೆ ವಾಣಿಜ್ಯ ಮುಖವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತು.

ಜಾತ್ರೆ ಎಂಬ ಶಬ್ಧ ಯಾತ್ರೆ ಶಬ್ಧದ ತದ್ಭವ ರೂಪವೆಂದು ತೋರುತ್ತದೆ, ಪರಸೆ ಜಾತ್ರೆಗೆ ಇರುವ ಇನ್ನೊಂದು ಹೆಸರು. ಸಾಮಾನ್ಯವಾಗಿ ಜಾತ್ರೆ ಧರ್ಮದ ಮೂಲವಾದ ಆರಾಧನಾ ಪದ್ಧತಿಯಿಂದ ಬೆಳೆದು ಬಂದಂತೆ ತೋರುತ್ತದೆ. ಆರಂಭದಲ್ಲಿ ದೇವತೆಯೊಂದರ ಆರಾಧನೆಗಾಗಿ ಜನ ಯಾತ್ರೆಗೆ ಹೋಗುವುದು ಪದ್ಧತಿಯಾಗಿತ್ತು, ಮುಂದೆ ಅದು ಸಂಪ್ರದಾಯವಾಗಿ ಬೆಳೆಯಿತು, ವರ್ಷಕ್ಕೆ ಯಾತ್ರೆಗೆ ಹೋಗುವವರ ಸಂಖ್ಯೆ ಅಧಿಕವಾಗಿ ಬೆಳೆಯಿತು. ಯಾತ್ರೆಗೆ ಹೋದ ಜನ ದೇವಸ್ಥಾನದ ಪರಿಸರದಲ್ಲಿ ತಂಗುವುದು ಅನಿವಾರ್ಯವಾಯಿತು ಹೀಗೆ ತಂಗುವವರ ಸಂಖ್ಯೆ ಅಧಿಕವಾದಾಗ ಮನೋರಂಜನಾ ಕ್ರಿಯೆಗಳು ರೂಢಿಗೆ ಬಂದವು ಜೊತೆಗೆ ಸಣ್ಣಪುಟ್ಟ ವ್ಯಾಪಾರಗಳು ನಡೆಯತೊಡಗಿದವು, ಇದು ಸಣ್ಣ ಪ್ರಮಾಣದಿಂದ ದೊಡ್ಡ ಪ್ರಮಾಣಕ್ಕೆ ಬೆಳೆಯಿತು, ದೇವರ ಒಳಮೂರ್ತಿಗಳಿಗೆ ಪ್ರತಿಯಾಗಿ ಹೊರಮೂರ್ತಿಗಳನ್ನು ಸೃಷ್ಟಿಸಿ ಉತ್ಸವಗಳನ್ನು ನಡೆಸಿದರು ಮುಂದೆ ಅವುಗಳನ್ನು ಉತ್ಸವ ಮೂರ್ತಿಗಳೆಂದು ಕರೆದರು.

ದೇವರ ಉತ್ಸವದ ಕಾಲದಲ್ಲಿ ಸ್ಥಳೀಯ ಜನಪದ ಕಲೆಗಳು ವಿಜೃಂಭಿಸಿದವು ನಾನಾ ನಂಬಿಕೆಗಳು, ಪದ್ಧತಿಗಳು, ಆಚರಣೆಗಳು ರೂಢಿಗೆ ಬಂದವು ಒಂದೊಂದು ದೇವನೆಲೆಯೂ ಒಂದೊಂದು ಸಂಸ್ಕೃತಿಯ ಕೇಂದ್ರವಾಗಿ ಬಲಗೊಂಡಿತು. ಕಾಲ ಬದ್ಧವಲ್ಲದ ಈ ದೈವಾರಾಧನೆಯ ಯಾತ್ರೆ ನಿಶ್ಚಿತ ಕಾಲಬದ್ಧತೆಗೆ ಒಳಗಾಯಿತು, ದೇವರ ವಿಶೇಷ ಆರಾಧನೆಗೆ ಮತ್ತು ತತ್ಸಂಬಂಧವಾದ ಕಲೆಗಳ ಆಚರಣೆಗೆ ವರ್ಷದಲ್ಲಿ ಒಂದು ನಿರ್ದಿಷ್ಟ ಸಮಯವನ್ನು ಗೊತ್ತು ಪಡಿಸಿ ಜಾತ್ರೆಯನ್ನು ನಡೆಸಿದರು, ತೇರುಗಳನ್ನು ಹರಿಸಿದರು. ಸಾಮಾನ್ಯವಾಗಿ ಜಾತ್ರೆಗಳನ್ನು ಸುಗ್ಗಿ ಸಮಯದಲ್ಲಿ ನಡೆಸುವುದೇ ಹೆಚ್ಚು, ಜಾತ್ರೆಗಳು ರೈತಾಪಿ ಜನಸಂಪರ್ಕದಿಂದ ಕೂಡಿರುವುದರಿಂದ ಸುಗ್ಗಿ ಅವರಿಗೆ ಸೂಕ್ತವಾದ ಕಾಲವಾಗಿದೆ. ವ್ಯವಸಾಯದ ಕಾರ್ಯ ಮುಗಿದು ದವಸ ಧಾನ್ಯವನ್ನು ಮನೆಗೆ ತುಂಬಿಕೊಂಡು ನೆಮ್ಮದಿಯಿಂದ ಇರುವುದರಿಂದ ಜಾತ್ರೆಗಳು ಸಂತೋಷವನ್ನು ಕೊಡುತ್ತವೆ.

### ಜಾತ್ರೆಯ ಉದ್ದೇಶ:

ಜಾತ್ರೆಯು ಸಮಷ್ಠಿಯ ಸಂಪತ್ತು, ಕ್ಷೇಮಾಭಿವೃದ್ಧಿಗಾಗಿ ಒಂದು ನಿಗದಿತ ಅವಧಿಯಲ್ಲಿ ಒಂದು ದೇವತೆ ಇಲ್ಲವೆ ಮಹಾಪುರುಷರ ಹೆಸರಿನಲ್ಲಿ ಧಾರ್ಮಿಕ ಕ್ಷೇತ್ರವೊಂದರಲ್ಲಿ ಸಾಮೂಹಿಕವಾಗಿ ಆಚರಿಸುವ ಧಾರ್ಮಿಕ ವಿಧಿಯಾಗಿ ಇಂದು ರೂಢಿಯಲ್ಲಿದೆ. ಇದು ಹಲವು ರೂಢಿ ಸಂಪ್ರದಾಯಗಳನ್ನು ಅನೇಕ

ಜಾನಪದ ಅಂಶಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡ ಒಂದು ಸಂಕೀರ್ಣ ಸಮುಚ್ಚಯವಾಗಿದೆ. ಪೌರ ಜಾನಪದರೆಲ್ಲರಿಗೆ ಜಾತ್ರೋತ್ಸವವೊಂದು ಪುಣ್ಯ ಪ್ರಸಂಗವಾಗಿದೆ, ಎಲ್ಲರೊಂದಿಗೆ ಕೂಡಿ ಆನಂದ ಪಡುವ ಪರ್ವ ಕಾಲವಾಗಿದೆ, ಜಾತ್ರೆಯ ಮೂಲ ಉದ್ದೇಶ ಸಮಷ್ಠಿಯ ಹಿತ ಚತುರ್ವಿಧ ಪುರುಷಾರ್ಥದೆಡೆಗೆ ಸಾಮಾಜಿಕನ ಮನಸ್ಸು ಅಭಿಮುಖವಾಗುವಂತೆ ಮಾಡುವ ಹವಣಿಕೆ ಜಾತ್ರೆಯಲ್ಲಿ ಹುದುಗಿದಂತಿದೆ. ಅನಾದಿ ಕಾಲದಿಂದಲೂ ಮಾನವನ ಲೌಕಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ಒಂದು ಬಗೆಯ ಸಾಮರಸ್ಯವಿದೆ ಈ ಸಾಮರಸ್ಯವನ್ನು ಜಾತ್ರೆಯಲ್ಲಿ ಕಾಣಬಹುದು, ಜಾತ್ರೆಯು ಭಿನ್ನ ಗುಣ ಸ್ವಭಾವ, ಅಭಿರುಚಿ, ಅಂತಸ್ತು, ವಯೋಮಾನಗಳ ಜನರೆಲ್ಲ ಒಂದೆಡೆ ಸೇರಲು ಅವಕಾಶ ಕಲ್ಪಿಸಿ ಅವರವರ ಇಚ್ಚೆಯನ್ನು ತಣಿಸುವ ಹವಣಿಕೆಯಿಂದ ನಿರ್ಮಿಸಿದ ರಸರಂಗವಾಗಿದೆ.

ಜಾತ್ರೆಯಿಂದ ಮನಸ್ಸು ಧಾರ್ಮಿಕತೆಯ ಪನ್ನೀರಿನಲ್ಲಿ ಮಿಂದು ಲೌಕಿಕ ಸುಖ ಸಂತೋಷವುಂಡು ನಿರಂತರ ದುಡಿಮೆಯ ದನಿವಿನಿಂದ ಅಲ್ಪ ವಿರಾಮ ಪಡೆಯುತ್ತದೆ. ಗೊಂದಲದ ಬದುಕಿನಿಂದ ಕ್ಷಣ ಕಾಲ ತಪ್ಪಿಸಿಕೊಂಡು ಲೌಕಿಕ ಪಾರಮಾರ್ಥಿಕಗಳೆರಡರ ಸವಿಸುಖದರ್ಶನ ಪಡೆಯಲು ಅನುಕೂಲವಾಗುತ್ತದೆ ಇದರಿಂದ ಸಾಮಾಜಿಕನ ಮನಸ್ಸು ಹಸನಾಗಿ, ರಸಾರ್ದ್ರವಾಗಿ ಸಂಯಮ ಶಕ್ತಿಯಂ ಕುರಿಸಿ ವಿವೇಕ ಚಿಗಿತು ಬದುಕು ಫಲಪ್ರದವಾಗುತ್ತದೆ.ಜಾತ್ರೆ ಸಮಾಜ ಸ್ವಾಸ್ಥ್ಯಕ್ಕಾಗಿಯೋ, ದೇವತೆಗಳ ಸಂಪ್ರಿತಿಗಾಗಿಯೋ, ಫಲ ಶಕ್ತಿಯ ಹಾರೈಕೆಗಾಗಿಯೋ ಮಹಾತ್ಮರ ಮಹಾಕಾರ್ಯದ ನೆನಪಿಗಾಗಿಯೋ, ನಾಡ ರಕ್ಷಣೆಗಾಗಿ ಜೀವತೆತ್ತ ವೀರಾಗ್ರಣಿಕೆಗರ, ಸತಿ ಹೋದ ಸಾಧ್ವಿಯರ ಗೌರವಾರ್ಥವಾಗಿಯೋ ಆಚರಣೆಗೊಂಡು ಜನಪದರಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಸಂಘಟನೆಗೆ ತೊಡಗಿದಂತೆ ತೋರುತ್ತದೆ.

**ಜಾತ್ರೆ ಅರ್ಥ (ಜಾತ್ರೆ ಹುಟ್ಟು):**

ಜಾತ್ರೆ ಎಂದು ಹುಟ್ಟಿತು? ಹೇಗೆ ಹುಟ್ಟಿತು? ಅದು ಮೂಲದಲ್ಲಿ ಯಾವ ರೂಪದಲ್ಲಿತ್ತು? ನಂತರ ಎಂಥ ಬದಲಾವಣೆಗಳನ್ನು ಕಂಡಿತು? ಈ ಬದಲಾವಣೆಗೆ ಕಾರಣಗಳೇನು? ಇವೆಲ್ಲ ರೋಚಕ ಪ್ರಶ್ನೆಗಳು , ಆದರೆ ಉತ್ತರಿಸಲು ಕಷ್ಟವಾದ ಪ್ರಶ್ನೆಗಳೂ ಹೌದು, ಕೆಲವನ್ನು ಇತಿಹಾಸ ಜ್ಞಾನದಿಂದಲೂ, ಹೆಚ್ಚಿನವನ್ನೂ ಊಹೆ ಮತ್ತು ತರ್ಕಗಳಿಂದಲೂ ಉತ್ತರಿಸಬೇಕಾದೀತು.

ಭಾರತೀಯರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಪಾಶ್ಚಿಮಾತ್ಯರಲ್ಲಿ ಜಾತ್ರೆಗಳಿಲ್ಲ, ರಥೋತ್ಸವಗಳಿಲ್ಲ, ಅವರು ಫೇರ್ ಎಂದು ಕರೆಯುವ ಜಾತ್ರೆಗಳು ಅಥವಾ ಪರಿಭಾಷೆಗಳು ವೈಭವೀಕರಿಸಿದ ಮಾರುಕಟ್ಟೆಗಳಂತೆ ಕಾಣುತ್ತವೆ. ಈ ಕಾರಣದಿಂದಲೇ ಕೆಲವರು ಅವನ್ನು ಪ್ರತಿ ವರ್ಷ ನೆರೆಯುವ ತಾತ್ಕಾಲಿಕ ಮಾರುಕಟ್ಟೆಗಳಂತೆ ವ್ಯಾಖ್ಯಾನಿಸಿದ್ದು ಆದರೆ ಅಲ್ಲಿಯೂ ಪ್ರಾಚೀನ ಕಾಲದಲ್ಲಿ ಜಾತ್ರೆಗಳು ದೈವ ಸನ್ನಿಧಿಯಲ್ಲೇ ನಡೆಯುತ್ತಿದ್ದವು ಮುಂದೆ ಅದೊಂದು ಮುಖ್ಯವಾದ ಧಾರ್ಮಿಕ ಸಂಪ್ರದಾಯವಾಗಿ ಬೆಳೆಯದೆ ಆರ್ಥಿಕ ಚಟುವಟಿಕೆಯಾಗಿ ಬೆಳೆಯಿತು. ಇತಿಹಾಸಕಾರರು ಜಾತ್ರೆಯ

ಇತಿಹಾಸವನ್ನೂ ಸ್ಥೂಲವಾಗಿ ಎರಡು ರೀತಿಯಲ್ಲಿ ಗುರುತಿಸುವುದನ್ನು ಕಾಣುತ್ತೇವೆ. ಬಹಳಷ್ಟು ಪಾಶ್ಚಿಮಾತ್ಯ ವಿದ್ವಾಂಸರ ಅಭಿಪ್ರಾಯದಂತೆ ಜಾತ್ರೆಯು ಆರ್ಥಿಕ ಸಮಸ್ಯೆಯೊಂದಕ್ಕೆ ಪರಿಹಾರ ರೂಪವಾಗಿ ಹುಟ್ಟಿಕೊಂಡಿತು. ಬಹು ಪ್ರಾಚೀನ ಕಾಲದಲ್ಲಿ ಏನಿಲ್ಲವೆಂದರೂ ಎರಡೂವರೆ ಸಾವಿರ ವರ್ಷಗಳಷ್ಟು ಹಿಂದಿನ ಕಾಲದಲ್ಲಿ ತಮಗೆ ಬೇಕಾದಕ್ಕಿಂತ ಹೆಚ್ಚು ಉತ್ಪಾದಿಸುವುದನ್ನು ಕಲಿತಿದ್ದರು. ವಿವಿಧ ರೀತಿಯ ಕೌಶಲ್ಯಗಳನ್ನು ವೃತ್ತಿಗಳನ್ನು ಬೆಳೆಸಿಕೊಂಡಿದ್ದರು. ತಾವು ಬೆಳೆದ ಕೃಷಿ ವಸ್ತುಗಳನ್ನು ಹಾಗೂ ತಮ್ಮ ಕೈಯಿಂದ ರೂಪಿಸಿದ ತಯಾರಿಕೆಗಳನ್ನು ಇತರರಿಗೆ ಕೊಡುವ ಮತ್ತು ಇತರರ ತಯಾರಿಕೆಗಳನ್ನು ಅವರಿಂದ ಪಡೆದುಕೊಳ್ಳುವ ಅವಶ್ಯಕತೆ ಉಂಟಾಯಿತು, ಇದರೊಂದಿಗೆ ತಮ್ಮ ಕರ ಕೌಶಲವನ್ನು ಪ್ರದರ್ಶಿಸುವ ಬಯಕೆಯೂ ಸೇರಿಕೊಂಡಿರಬೇಕು, ಈ ಪ್ರಕ್ರಿಯೆಯಲ್ಲಿ ವಸ್ತು ವಿನಿಮಯ ಪದ್ಧತಿ ಬೆಳೆಯಿತು ಅಂದರೆ ತಮ್ಮ ತಯಾರಿಕೆಗಳ ಬದಲಿಗೆ ಇನ್ನೊಬ್ಬರ ಉತ್ಪನ್ನಗಳನ್ನು ಕೈಬದಲು ಮಾಡಿಕೊಳ್ಳುವ ಪದ್ಧತಿ ಹುಟ್ಟಿಕೊಂಡಿತು, ಮುಂದೆ ಏನಾದರೊಂದು ವಸ್ತುವನ್ನು ಮೌಲ್ಯದ ಅಳತೆಯಾಗಿ ಅವರು ಬೆಳೆಸಿಕೊಂಡರು, ಬರಬರುತ್ತಾ ನಗದು ಹಣ ಅಥವಾ ನಾಣ್ಯವನ್ನು ಬಳಸಿ ಕ್ರಯವಿಕ್ರಯವನ್ನು ಸುಗಮಗೊಳಿಸಿದರು ಆದರೆ ಈಗಿನಂತೆ ಪ್ರತಿಯೊಂದು ಕಡೆ ಪ್ರತಿದಿನವೂ ಈ ಕ್ರಯವಿಕ್ರಯ ಮಾಡುವುದು ಆಗ ಸಾಧ್ಯವಿರಲಿಲ್ಲ, ಪ್ರಾಯಶಃ ಅವಶ್ಯಕವೂ ಇದ್ದಿಲ್ಲ ಆದರೂ ತಾವೂ ಬಳಸಿ ಮಿಗಿಸಿದ್ದನ್ನು ಇತರರಿಗೆ ಮಾರಲು ಹಾಗೂ ತಮ್ಮಲ್ಲಿಲ್ಲದ ವಿವಿಧ ವಸ್ತುಗಳನ್ನು ಪಡೆಯಲು ಏನಾದರೊಂದು ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು ಈ ವ್ಯವಸ್ಥೆಯೇ ಜಾತ್ರೆ.

**ಜಾತ್ರೆಯ ಮಹತ್ವ:**

ಜಾತ್ರೆ ಧರ್ಮವನ್ನು ಜನಪ್ರಿಯಗೊಳಿಸಿತು ಭಕ್ತರನ್ನು ಒಂದೇ ದೇವರ ಒಕ್ಕಲುಗಳನ್ನು ಒತ್ತಟ್ಟಿಗೆ ತಂದಿತು. ಪೂಜೆ ಹರಕೆ, ಕಾಣಿಕೆಗಳ ಮೂಲಕ ದೈವದ ನಂಟನ್ನು ಬಿಗಿಗೊಳಿಸಿತು, ಕಾಯಿಲೆ, ಕಷ್ಟ ಕಾರ್ಪಣ್ಯಗಳಲ್ಲಿ ದೇವರಿಗೆ ಮುಡಿಪಿಟ್ಟು ಯಾತ್ರೆ–ಜಾತ್ರೆ ಮಾಡುವ ಹರಕೆ ಹೊತ್ತರೆ ಮನಸ್ಸಿಗೆ ನೆಮ್ಮದಿ ವರ್ಷಾವಧಿ ಜಾತ್ರೆಗೆ ಹೋಗಿ ಹರಕೆ ಸಂದಾಯ ಮಾಡುವುದು ನಮ್ಮ ಜನಪದರ ಕಷ್ಟಗಳಿಗೆ ಪರಿಹಾರ ಕೊಡುವ ಒಂದು ಮುಖ್ಯ ಉಪಾಯ ಜಾತ್ರೆಯಿಂದ ಲಾಭವುಂಟು ನಷ್ಟ ಎಂದೂ ಇಲ್ಲ ಎಂದು ನಮ್ಮವರ ಭಾವನೆ, ಊರಿನಲ್ಲಿ ಮಳೆ ಬೀಳದಿದ್ದಾಗ ಬೆಳೆ ಹಾಳಾದಾಗ ಬಾವಿಗಳ ನೀರು ಬತ್ತಿದಾಗ ಜನರಿಗೂ ದನಕರುಗಳಿಗೂ ಸೋಂಕು ರೋಗಗಳು ಬಂದಾಗ ಜಾತ್ರೆ ನಡೆಸುವ ರೂಢಿಯುಂಟು ಎಂಬುದು ಜನಪದರ ನಂಬಿಕೆ, ಈ ನಂಬಿಕೆ ಅವರನ್ನು ಕಾಪಾಡುತ್ತಾ ಬಂದಿದೆ, ಅವರಿಗೆ ಸಂಕಟಗಳ ವಿರುದ್ಧ ಹೋರಾಡುವ ಧೈರ್ಯ ಕೊಟ್ಟಿದೆ ದನಕರುಗಳಿಗೆ ಅಂಟು ರೋಗಗಳು ಬಂದಾಗ ವಿಶೇಷ ಜಾತ್ರೆಗಳು ನೆರೆಯುವುದುಂಟು.ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ವಿಶೇಷ ಪೂಜೆಗಳು ನಡೆಯುತ್ತಿರುವುದ್ದನ್ನು ಲೇಖಕರು ಕಂಡಿದ್ದಾರೆ. ದಿಲ್ಲಿಯ ಹತ್ತಿರ ಗ್ರಾಮವೊಂದರಲ್ಲಿ ನಡೆದ ಇಂಥ "ಆಖ್ವಾ" ಎಂಬ

ಆಚರಣೆಯನ್ನು ತಾವು ಕಂಡಿದ್ದಾರೆ. ಡೇವಿಡ್ ಮೆಂಡಲ್ ಬಾಮ್ ಎಂಬ ಸಮಾಜಶಾಸ್ತ್ರಜ್ಞರು ವರದಿ ಮಾಡಿದ್ದಾರೆ.

**ಹಲ್ಲರೆ ಗ್ರಾಮದ ಜಾತ್ರಾ ಮಹೋತ್ಸವ:**

ಈ ಜಾತ್ರೆಯು ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ಹಲ್ಲರೆ ಎಂಬ ಗ್ರಾಮದಲ್ಲಿ ಪ್ರತಿ ವರ್ಷವು ಫೆಬ್ರವರಿ ತಿಂಗಳ ಮೊದಲ ವಾರದಲ್ಲಿ ಒಂದು ವಾರಗಳ ಕಾಲ ಆಚರಣೆ ಮಾಡಲಾಗುತ್ತದೆ.

**ಜಾತ್ರೆಯ ವಿಶೇಷತೆ:**

ಜಾತ್ರೆಯ ಮೊದಲ ದಿನವಾದ ಶುಕ್ರವಾರದಂದು ದೇವರ ಸತ್ತಿಗೆಯನ್ನು ನಾಯಕ ಜನಾಂಗದ ಬೀದಿಯಿಂದ ಮೆರವಣಿಗೆಯ ಮೂಲಕ ಪೂಜೆ ಮಾಡಿಕೊಂಡು ಬರುವುದು. ಜಾತ್ರೆಯ ಎರಡನೇ ದಿನ ಶನಿವಾರದಂದು ಪರಿಶಿಷ ಜಾತಿ ಜನಾಂಗದ ಬೀದಿಯಿಂದ ಚಕ್ರರು ಎಂಬ ಮನೆತನಕ್ಕೆ ಸೇರಿದ ಕುಟುಂಬದವರು ಹೆಬ್ರಾವನ್ನು ಹೊತ್ತುಕೊಂಡು ಬೀದಿ ಬೀದಿಗಳಲ್ಲಿ ಪೂಜೆಯನ್ನು ಮಾಡಿ ದೇವಸ್ಥಾನಕ್ಕೆತೆಗೆದುಕೊಂಡು ಹೋಗುವುದು. ಜಾತ್ರೆಯ ಮೂರನೇ ದಿನ ಭಾನುವಾರ ತೇರಿನ ಮೇಲ್ಭಾಗಕ್ಕೆ ಹಾಕುವಂತಹ ಕಳಸವನ್ನು ಪೂಜೆ ಮಾಡಿ ತೇರನ್ನು ಕಟ್ಟಲು ಪ್ರಾರಂಭಿಸುತ್ತಾರೆ. ಈ ತೇರನ್ನು ಲಿಂಗಾಯತ ಮತ್ತು ನಾಯಕ ಜನಾಂಗದವರು ಕಟ್ಟುತ್ತಾರೆ ತೇರನ್ನು ಕಟ್ಟಲು ಪರಿಶಿಷ್ಟಜಾತಿ ಜನಾಂಗದವರು ದಟ್ಟವನ್ನು, ಉಪ್ಪಾರ ಜನಾಂಗದವರು ಅಚ್ಚೆಯನ್ನು, ಅಗಸರು (ಮಡಿವಾಳ ಶೆಟ್ಟರು) ಬಟ್ಟೆಯನ್ನು ಕೊಡುತ್ತಾರೆ, ೨೫೦೦೦ ರೂ.ಗಳ ಹೂವಿನ ಹಾರದಿಂದ ತೇರನ್ನು ಸಿಂಗರಿಸಲಾಗುತ್ತದೆ, ಸಿಂಗರಿಸಿದ ನಂತರ ಮಂಗಳವಾರ ರಾತ್ರಿ ಬೀದಿ ಬೀದಿಗಳಲ್ಲಿ ತೇರನ್ನು ಎಳೆದು ಮೆರವಣಿಗೆ ಮಾಡಿ ಪಟಾಕಿ ಸಿಡಿ ಮದ್ದುಗಳನ್ನು ಸಿಡಿಸಿ ಹಲ್ಲರೆ ಗ್ರಾಮದಿಂದ ೩ಕಿ.ಮೀ ದೂರದಲ್ಲಿರುವ ಯತ್ನಮ್ಮಳ ದೇವಸ್ಥಾನಕ್ಕೆ ಹೋಗುತ್ತಾರೆ. ಇಲ್ಲಿ ಎಲ್ಲಾ ಜನಾಂಗದವರು ಒಗ್ಗಟ್ಟಿನಿಂದ ಸೇರಿ ಜಾತ್ರೆಯನ್ನು ವಿಜೃಂಭನೆಯಿಂದ ಆಚರಣೆ ಮಾಡುತ್ತಾರೆ.

ಬುಧವಾರ ಬೆಳಿಗ್ಗೆ ಯತ್ನಮ್ಮಳಿಗೆ ಹರಕೆ ಹೊತ್ತ ಜನರು ಮರಿ ಕೋಳಿಯನ್ನು ಬಲಿ ಕೊಡುತ್ತಾರೆ. ಈ ಜಾತ್ರೆಯ ವಿಶೇಷವೆನೆಂದರೆ ೩೦ ರಿಂದ ೪೦ ಊರುಗಳಿಂದ ದನ ಕರುಗಳನ್ನು ಕರೆ ತಂದು ಪೂಜೆ ಯನ್ನು ಮಾಡಿಸಿ ಮೆರವಣಿಗೆಯನ್ನು ಮಾಡಿಸುತ್ತಾರೆ. ದೇವಸ್ಥಾನದ ಮುಂಬ್ಭಾಗದಲ್ಲಿ ತಮ್ಮ ತಮ್ಮ ಮನೆಯಿಂದಲೇ ಅಕ್ಕಿ ಬೆಲ್ಲ ಮಡಿಕೆಯನ್ನು ತಂದು ಮಡೆ ಉಯ್ಯುತ್ತಾರೆ ಈ ಪದ್ಧತಿಯು ರೂಢಿಯಲ್ಲಿದ್ದು ಪುರಾತನ ಕಾಲದಿಂದಲೂ ಕೂಡ ಈ ಜಾತ್ರೆಯನ್ನು ಆಚರಿಸಿಕೊಂಡು ಬಂದಿದ್ದಾರೆ, ಗ್ರಾಮದಲ್ಲಿ ಯಾವುದೇ ರೀತಿಯ ತೊಂದರೆ ಆಗದೆ ಇರಲಿ ಹಾಗೂ ಶಾಂತಿ ಮತ್ತು ಸುಬೀಕ್ಷೆಯಿಂದ ಗ್ರಾಮ ಇರಲಿ ಎಂಬ ಉದ್ದೇಶದಿಂದ ಆಚರಿಸಲಾಗುತ್ತದೆ. ಜಾತ್ರೆಯನ್ನು ಆಚರಣೆ ಮಾಡಿಲ್ಲವೆಂದರೆ ಊರಿಗೆ ಹಾಗೂ

ಊರಿನ ಜನರಿಗೆ ದನ ಕರುಗಳಿಗೆ ತೊಂದರೆ ಉಂಟಾಗುತ್ತದೆ ಎಂಬ ನಂಬಿಕೆಯು ಈ ಊರಿನ ಜನರಲ್ಲಿ ಇದೆ. ಜಾತ್ರೆಯು ಮುಗಿದ ನಂತರ ದೇವರ ಹುಂಡಿಯಲ್ಲಿ ಶೇಖರಣೆ ಆಗಿರುವಂತಹ ಕಾಣಿಕೆಯನ್ನು ನಾಯಕ ಮತ್ತು ಲಿಂಗಾಯತ ಜನಾಂಗದವರು ತಮ್ಮ ಕೆಲಸ ಕಾರ್ಯಗಳಿಗೆ ಸದುಪಯೋಗ ಪಡಿಸಿಕೊಂಡು ಮರು ವರ್ಷದ ಜಾತ್ರೆಯ ಸಂದರ್ಭ ಸಮಯಕ್ಕೆ ಅದನ್ನು ಹಿಂತಿರುಗಿಸಬೇಕಾಗುತ್ತದೆ. ಈ ಜಾತ್ರೆಗೆ ಮೈಸೂರು, ಬೆಂಗಳೂರು ನಂಜನಗೂಡು, ಗುಂಡ್ಲುಪೇಟೆ ಹಾಗೂ ಅಕ್ಕ ಪಕ್ಕದ ಊರುಗಳಿಂದ ಬಂದು ಕಣ್ತುಂಬಿಕೊಳ್ಳುತ್ತಾರೆ. ಈ ಜಾತ್ರೆಯನ್ನು ಪ್ರತಿ ವರ್ಷವು ಆಚರಣೆ ಮಾಡಿಕೊಂಡು ಬಂದಿದ್ದು ಎಲ್ಲಾ ಜಾತಿಯವರು ಕೂಡ ತೇರನ್ನು ಒಗ್ಗಟ್ಟಿನಿಂದ ಎಳೆದು ಹಬ್ಬವನ್ನು ಆಚರಣೆ ಮಾಡುತ್ತಾರೆ.

**ಉಪಸಂಹಾರ:**

ಜಾತ್ರೆಗಳು ಕಲೆಗಳಿಂದ ಸ್ಫೂರ್ತಿ ನೀಡುತ್ತವೆಯೊ ಅಂತೆಯೇ ಜನಪದ ಸಾಹಿತ್ಯದ ಬಹುಮುಖ ವಿಕಾಸಕ್ಕೂ ಪ್ರೇರಕ ಶಕ್ತಿಗಳಾಗುತ್ತವೆ. ಜನಪದರ ಕಲ್ಪನಾ ಪ್ರತಿಭೆ ಎಷ್ಟು ಫಲವತ್ತಾದುದು ಎಂಬುದಕ್ಕೆ ದೇವರ ಮತ್ತು ಜಾತ್ರೆಗಳ ಸುತ್ತಮುತ್ತ ಅವರು ಹೆಣೆದಿರುವ ಕಥೆ, ಪುರಾಣ, ದಂತಕಥೆ ಐತಿಹ್ಯಗಳೇ ನಿದರ್ಶನಗಳಾಗಿವೆ. ಧಾರ್ಮಿಕ ಆಚರಣೆಗಳ ಬಗ್ಗೆ ಜನರಲ್ಲಿ ವಿಶ್ವಾಸ ಶ್ರದ್ಧೆಗಳನ್ನು ಮೂಡಿಸುವ ಸಲುವಾಗಿ ಅನೇಕ ಐತಿಹ್ಯಗಳು ಸೃಷ್ಟಿಯಾಗುತ್ತವೆ. ಅವು ಚಿರಂತನ ಮೌಲ್ಯಗಳ ಅಭಿವ್ಯಕ್ತಿಗೆ ಸಾಂಕೇತಿಕ ಮಾಧ್ಯಮಗಳಾಗಿವೆ. ಅವು ಮೌಢ್ಯಗಳ ಸಂತಾನಕ್ಕೆ ಬೀಜವಾಗಿ ಜನಮನವನ್ನು ಅಧೋಮುಖಗೊಳಿಸುವುದಾದರೆ ತ್ಯಾಜ್ಯವಾಗುತ್ತವೆ. ಜನಪದ ಕಥೆಗಳಂತೆಯೇ ದೇವರ ಅಲಂಕಾರ ವೈಭವವನ್ನು ವಿವಿಧ ಕಲಾಮೇಳಗಳ ಮೆರವಣಿಗೆಯೊಡನೆ, ವಾದ್ಯವೃಂದದ ಕೋಲಾಹಲದ ನಡುವೆ ಆಕಾಶಚಕ್ರ, ಬಾಣಬಿರುಸು ಹೂಕುಡಿಕೆ ಮೊದಲಾದ ಅಗ್ನಿ ವಿನೋದಗಳ ಸುರಿಮಳೆಯಲ್ಲಿ ನಡೆಯುವ ರಥೋತ್ಸವದ ಅದ್ಧೂರಿಯನ್ನು ಭಾವೋದ್ರಿಕ್ತ ಭಕ್ತ ಜನಜಂಗುಳಿಯ ಲೀಲಾಮೋದಮಯ ಸಾಮೂಹಿಕ ಪ್ರಜ್ಞೆಯ ಮಿಡಿತ ಅನಂತಗಾನ ತ್ರಿಪದಿ, ಸಾಂಗತ್ಯ, ಲಾವಣಿಗಳ ರೂಪದಲ್ಲಿ ಹೊರಹೊಮ್ಮುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹಲ್ಲರೆ ಗ್ರಾಮದ ಧಾರ್ಮಿಕ ಆಚರಣೆಗಳು ಸಾಂಸ್ಕೃತಿಕವಾಗಿ ಸಮಾಜದ ಹಿತದೃಷ್ಟಿಯಿಂದ ಧಾರ್ಮಿಕ ನಂಬಿಕೆಯನ್ನು ಪ್ರತಿಷ್ಠಾಪಿಸುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

## ಪರಾಮರ್ಶನ ಗ್ರಂಥಗಳು:

೧. ಹಂಪ ನಾಗರಾಜಯ್ಯ - ಕರ್ನಾಟಕ ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೮೫

೨. ಡಾ.ಸಿದ್ದಲಿಂಗಯ್ಯ – ಗ್ರಾಮ ದೇವತೆಗಳು, ಮೂಲ ಭಾರತಿ ಪ್ರಕಾಶನ ಬೆಂಗಳೂರು, ೧೯೯೭

೩. ಡಾ. ಬಿ ಸಿ ಪಾಟೀಲ – ಗ್ರಾಮ ದೇವತೆಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯

೪. ಎಂ,ಎನ್.ವೆಂಕಟೇಶ - ಮೈಲಾರದ ಜಾತ್ರೆಗಳು, ಅಭಿ ಆದರ್ಶನ ಪ್ರಕಾಶನ, ಭದ್ರಾವತಿ, ೧೯೯೮

೫. ಡಾ.ಸಾ.ಚಿ ರಮೇಶ್ -ಕರ್ನಾಟಕದ ಜನಪದ ಆಚರಣೆಗಳು – ಪ್ರಸಾರಾಂಗ ಕನ್ನಡ ವಿ ವಿ ಹಂಪಿ, ೨೦೧೦

೬. ಹಿ.ಚಿ ಬೋರಲಿಂಗಯ್ಯ - ಕರ್ನಾಟಕ ಜಾನಪದ ಕಲೆಗಳ ಕೋಶ–(ಸಂ) – ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,೧೯೯೬

೭. ರಮೇಶ್ ಬಿ.ಜಿ. – ನಮ್ಮ ಹಬ್ಬಗಳು, ಚಂದನ ಪ್ರಕಾಶನ, ಬೆಂಗಳೂರು,೨೦೦೭